# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ 114–ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳ ವಿರುದ್ದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರ ಪತ್ರ ಸಂಖ್ಯೆ: ಜಿಪಂಬ/ಸಿಬ್ಬಂದಿ(5)/ಗ್ರಾಪಂ/62/18–19, ದಿನಾಂಕ: 09/10/2018.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1135/ಗ್ರಾಪಂಅ/2018, ದಿನಾಂಕ: 02/02/2019.
3) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/144/2018–19/1008, ದಿನಾಂಕ: 27/05/2019.
4) ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 1110 ಗ್ರಾಪಂಅ 2018, ದಿನಾಂಕ:18/09/2019.
5) ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, 114–ಡಾಣಾಪುರ ಗ್ರಾಮ ಪಂಚಾಯಿತಿ ಆಪಾದಿತ 8 ಜನ ಸದಸ್ಯರುಗಳು ದಿನಾಂಕ:18/09/2019ರ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:09/10/2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ 114–ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳು 114–ಡಣಾಪುರ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಗಳಿಗೆ ಸತತವಾಗಿ ನಾಲ್ಕು ಬಾರಿಗಳಿಗಿಂತ ಹೆಚ್ಚಾಗಿ ಗೈರು ಹಾಜರಾಗುವ ಮೂಲಕ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ 43–ಎ(1)(iii) ಅನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಸದರಿಯವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರಂತೆ ಕ್ರಮಜರುಗಿಸುವ ಕುರಿತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಕಲಂ 43(ಎ)ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5)ರಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ವಿಚಾರಣಾಧಿಕಾರಿಗಳು 114–ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ವಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳು ದಿನಾಂಕ:14/12/2017, 17/02/2018, 26/02/2018, 21/06/2018 ಮತ್ತು 06/07/2018ಗಳಂದು ನಿಗಧಿಪಡಿಸಿದ ಸದರಿ ಗ್ರಾಮ ಪಂಚಾಯಿತಿಯ 4ಕ್ಕಿಂತ ಅಧಿಕ ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರು ಹಾಜರಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43–ಎ(1)(iii) ಅನ್ನು ಸ್ಪಷ್ಟವಾಗಿ ಉಲ್ಲಂಘಿಸಿ, ತಮ್ಮ ಕರ್ತವ್ಯನಿರ್ವಹಣೆಯಲ್ಲಿ ಲೋಪ ಎಸಗಿರುವುದು ವಿಚಾರಣಾ ವರದಿಯಲ್ಲಿ ಕಂಡುಬಂದಿರುತ್ತದೆ ಎಂದು ತಿಳಿಸುತ್ತಾ, ಸದರಿಯವರ ವಿರುದ್ಧ ಕ್ರಮ ಜರುಗಿಸುವ ಸಂಬಂಧ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

.....2

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಂತೆ ವಿಚಾರಣಾಧಿಕಾರಿಗಳ ವರದಿಯನ್ವಯ ಕ್ರಮಜರುಗಿಸುವ ಸಂಬಂಧ ದಿನಾಂಕ: 18/09/2019ರಂದು ಎರಡನೇ ಕಾರಣ ಕೇಳುವ ನೋಟೀಸ್ ಅನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ದಿನಾಂಕ:18/09/2019ರಂದು ಜಾರಿಗೊಳಿಸಿದ್ದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳು ದಿನಾಂಕ:09/10/2019ರಂದು ಎಲ್ಲಾ 8 ಜನ ಸದಸ್ಯರು ಈ ಕೆಳಕಂಡಂತೆ ಒಂದೇ ರೀತಿಯ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ:-

- ನಾವುಗಳು ಜೂನ್-2015ರಿಂದ ಸದರಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು, ನಾವುಗಳು ಈ ಹಿಂದಿನಿಂದಲೂ ಸಭೆಗೆ ಗೈರು ಹಾಜರಾಗದೇ ಸಾಮಾನ್ಯ ಸಭೆಗೆ ಹಾಜರಾಗಿರುತ್ತೇವೆ. ಆದರೆ, ಈ ಹಿಂದಿನ ಅಧ್ಯಕ್ಷರಾದ ಹಾಗೂ ಹಾಲಿ ಸದಸ್ಯರಾದ ಶ್ರೀ ಗಾಂಜಿ ಭೀಮಪ್ಪ ಇವರು ದುರುದ್ದೇಶದಿಂದ ತಮ್ಮನ್ನು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ಈ ರೀತಿ ತಂತ್ರ ಹೂಡಿರುತ್ತಾರೆಂದು ತಿಳಿಸಿರುತ್ತಾರೆ.
- ಈ ಹಿಂದೆ ಹೊಸಪೇಟೆ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಾವು ಗೈರು ಹಾಜರಾದ ಬಗ್ಗೆ ಅವರ ಹಂತದಲ್ಲಿ ನೋಟಿಸ್‌ನ್ನು ಜಾರಿ ಮಾಡಬಹುದಾಗಿತ್ತು. ಆದರೆ, ಅವರು ಉದ್ದೇಶಪೂರ್ವಕವಾಗಿ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ) ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.
- ಸದರಿ ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷರು ಶ್ರೀ ಗಾಂಜಿ ಭೀಮಪ್ಪ ಇವರು ತಮಗೆ ಸಾಮಾನ್ಯ ಸಭೆಗೆ ಗೈರು ಹಾಜರಾದ ಬಗ್ಗೆ ನೋಟಿಸ್‌ನ್ನು ನೀಡಬಹುದಾಗಿತ್ತು. ಆದರೆ ಸದರಿ ಅಧ್ಯಕ್ಷರು ದುರುದ್ದೇಶದಿಂದ ನೋಟಿಸ್ ಸಹ ನೀಡಿರುವುದಿಲ್ಲ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೋಟಿಸ್‌ನ್ನು ಜಾರಿ ಮಾಡಿದ್ದು, ಅದಕ್ಕೆ ಸಮಯ ಕೂಡ ನೀಡಿರುವುದಿಲ್ಲ. ತರಾತುರಿಯಲ್ಲಿ ನೋಟಿಸ್ ಜಾರಿ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.
- ತಾವುಗಳು ಸರ್ಕಾರದ ನಿಯಮಾವಳಿ ಮತ್ತು ಪಂಚಾಯತ್ ರಾಜ್‌ಕಾಯ್ದೆ **(1993ರ ಪ್ರಕರಣ 43-ಎ(1)(iii)ಗೆ** ವಿರೋಧವಾಗಿ ನಡೆದುಕೊಂಡಿರುವುದಿಲ್ಲವೆಂದು ಹಾಗೂ ತಾವುಗಳು ಸಾರ್ವಜನಿಕರಿಂದ ಆಯ್ಕೆಯಾಗಿದ್ದು ತಮ್ಮ ವಾರ್ಡ್‌ಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯವಾಗಬೇಕಿರುವುದರಿಂದ ಈ ಒಂದು ಪ್ರಕರಣದಿಂದ ತಮಗೆ ಪದೇ ಪದೇ ಮಾನಸಿಕವಾಗಿ ಹಿಂಸೆಯಾಗುತ್ತಿದೆಂದು ಹಾಗೂ ಈಗ ತಮ್ಮ ಸದಸ್ಯತ್ವದ ಅವಧಿಯು ಇನ್ನೂ 08 ತಿಂಗಳು ಬಾಕಿ ಉಳಿದಿರುವುದರಿಂದ ವಾರ್ಡ್‌ನ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಮಾನವಿಯ ದೃಷ್ಟಿಯಿಂದ ಈ ಪ್ರಕರಣದಿಂದ ತಮ್ಮನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳು, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿನ ಅಂಶಗಳು ಹಾಗೂ ಸದರಿ ಗ್ರಾಮ ಪಂಚಾಯಿತಿ 08 ಜನ ಸದಸ್ಯರುಗಳು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ಸದರಿ 08 ಜನ ಸದಸ್ಯರುಗಳು ದಿನಾಂಕ:14/12/2017, 17/02/2018, 26/02/2018, 21/06/2018 ಮತ್ತು 06/07/2018ಗಳಂದು ನಿಗಧಿಪಡಿಸಿದ ಸದರಿ ಗ್ರಾಮ ಪಂಚಾಯಿತಿಯ 4ಕ್ಕಿಂತ ಅಧಿಕ ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರು ಹಾಜರಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ **43-ಎ(1)(iii) ಅನ್ನು** ಉಲ್ಲಂಘಿಸಿರುವುದು **ವಿಚಾರಣಾಧಿಕಾರಿಗಳ ವರದಿಯಿಂದ** ಸ್ಪಷ್ಟವಾಗಿ ಕಂಡುಬಂದಿರುವುದರಿಂದ 114-ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್.,

.....3

ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳನ್ನು 114-ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಕೆಳಕಂಡ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1110/ಗ್ರಾಪಂಅ/2018**
**ಬೆಂಗಳೂರು, ದಿನಾಂಕ:19-12-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ 114-ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳು 114-ಡಣಾಪುರ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:14/12/2017, 17/02/2018, 26/02/2018, 21/06/2018 ಮತ್ತು 06/07/2018ಗಳಂದು ನಿಗದಿಪಡಿಸಿದ ಸಾಮಾನ್ಯ ಸಭೆಗಳಿಗೆ ಸತತವಾಗಿ 4ಕ್ಕಿಂತ ಅಧಿಕ ಬಾರಿ ಗೈರು ಹಾಜರಾಗಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ **43-ಎ(1)(iii) ಅನ್ನು ಉಲ್ಲಂಘಿಸಿರುವುದು** ವಿಚಾರಣಾಧಿಕಾರಿಗಳ ವರದಿಯಿಂದ ಸಾಬೀತಾಗಿರುವುದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ **ಪ್ರಕರಣ 43 (ಎ)ರನ್ವಯ** ಶ್ರೀಮತಿ ಆಶಾ, ಶ್ರೀ ಬಡೇಸಾಬ್, ಶ್ರೀಮತಿ ಅನಿತಾ ಟಿ.ಎನ್., ಶ್ರೀ ಗಂಗಾಧರಯ್ಯ, ಶ್ರೀ ಬಿ.ಯಮನೂರ, ಶ್ರೀಮತಿ ಬುಲ್ಡಿ ಹುಲಿಗೆಮ್ಮ, ಶ್ರೀ ಹೆಚ್.ದುರುಗಪ್ಪ, ಶ್ರೀ ವೆಂಕಟೇಶ ನಾಯ್ಕ ಇವರುಗಳನ್ನು 114-ಡಣಾಪುರ ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಮೇಶ್ ಡಿ.ಬಿ) 19/12/19
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ಹೊಸಪೇಟೆ ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5. ಶ್ರೀಮತಿ ಆಶಾ, ಹಂಪಿನಕಟ್ಟೆ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಶ್ರೀಮತಿ ಟಿ.ಎನ್.ಅನಿತಾ, ಗಾಳಿಮ್ಮನಗುಡಿ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶ್ರೀ ಬಡೇಸಾಬ್, ಹಂಪಿನಕಟ್ಟೆ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

.....4

8. ಶ್ರೀ ಗಂಗಾಧರ್, ಗೌರಿಪುರ (ಹನುಮನಹಳ್ಳಿ) ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
9. ಶ್ರೀಮತಿ ಬುಲ್ಡಿ ಹುಲಿಗೆಮ್ಮ, ವೆಂಕಟಾಪುರ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
10. ಶ್ರೀ ದುರುಗಪ್ಪ, ವೆಂಕಟಾಪುರ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
11. ಶ್ರೀ ವೆಂಕಟೇಶ ನಾಯ್ಕ್, ಗಾಳಿಮ್ಮನಗುಡಿ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
12. ಶ್ರೀ ಬಿ.ಯಮನೂರ, ಡಣಾಪುರ ವಾರ್ಡ್, 114-ಡಣಾಪುರ ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
13. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
14. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು(ಪಂ.ರಾಜ್-1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

****